# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಚೇರಿ, ನ.ರಾ.ಚೌಕ, ಬೆಂಗಳೂರು - 02

(9)

# ಸಾರ್ವಜನಿಕ ಸೂಚನೆ

**ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡ ಅವಶೇಷಗಳಂತಹ ಅನುಪಯುಕ್ತ ಸಾಮಗ್ರಿಗಳನ್ನು ಹಾಗೂ ಕಟ್ಟಡ ನಿರ್ಮಾಣಕ್ಕೆ ಅಗೆಯುವ ಮಣ್ಣನ್ನು ವಿಲೇವಾರಿ ಮಾಡುವ ಬಗ್ಗೆ.**

- ಬಿಬಿಎಂಪಿ ವ್ಯಾಪ್ತಿಯಲ್ಲಿ ಬೃಹತ್ ಸಮುಚ್ಛಯಗಳು, ವಾಣಿಜ್ಯ ಕಟ್ಟಡಗಳು, ನಿವಾಸಗಳಿಂದ ಉತ್ಪತ್ತಿಯಾಗುವ ಅನುಪಯುಕ್ತ ಸಾಮಗ್ರಿಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ, ರಸ್ತೆ ಬದಿಗಳಲ್ಲಿ ಅಕ್ರಮವಾಗಿ ವಿಲೇವಾರಿ ಮಾಡುತ್ತಿರುವುದು ಪಾಲಿಕೆಯ ಗಮನಕ್ಕೆ ಬಂದಿದೆ.
- ಈ ಅಕ್ರಮ ವಿಲೇವಾರಿಯಿಂದ ನಗರದ ಸೌಂದರ್ಯ ಹಾಳಾಗುವುದರ ಜೊತೆಗೆ ನಾಗರಿಕರ ಓಡಾಟಕ್ಕೆ, ವಾಹನ ಸಂಚಾರಕ್ಕೆ ಮತ್ತು ಚರಂಡಿಗಳಲ್ಲಿ ಸರಾಗವಾಗಿ ಹರಿಯುವ ನೀರಿಗೆ ಅಡ್ಡಿಯಾಗುತ್ತಿದ್ದು, ಇದರಿಂದ ರಸ್ತೆಗಳಲ್ಲಿ ಗುಂಡಿಗಳಾಗುತ್ತಿವೆ.
- ಈ ರೀತಿ ಅನಧಿಕೃತವಾಗಿ ರಾತ್ರಿಯ ವೇಳೆ ಯಾರಿಗೂ ತಿಳಿಯದಂತೆ ಕಸ ಹಾಗೂ ಮತ್ತಿತರ ಅನುಪಯುಕ್ತ ಸಾಮಗ್ರಿಗಳನ್ನು ಎಲ್ಲೆಂದರಲ್ಲಿ ಸುರಿಯುವುದನ್ನು ಪಾಲಿಕೆಯು ತೀವ್ರವಾಗಿ ಖಂಡಿಸುತ್ತದೆ.
- ವಿಶೇಷವಾಗಿ ಸಾರ್ವಜನಿಕ ಸ್ಥಳಗಳಾದ ರಸ್ತೆ ಬದಿಗಳು, ಪಾದಚಾರಿ ರಸ್ತೆ, ಆಟದ ಮೈದಾನ, ಖಾಲಿ ನಿವೇಶನಗಳು, ಉದ್ಯಾನವನ ಮತ್ತು ಸರ್ಕಾರಿ ಜಾಗಗಳಲ್ಲಿ ಅಕ್ರಮ ತ್ಯಾಜ್ಯ ವಿಲೇವಾರಿಯನ್ನು ನಿಷೇಧಿಸಿದ್ದು, ಇದನ್ನು ತಡೆಯುವ ನಿಟ್ಟಿನಲ್ಲಿ ಪಾಲಿಕೆಯು ಕಠಿಣ ಕ್ರಮ ಕೈಗೊಳ್ಳುವ ಕುರಿತು ದೃಢ ನಿರ್ಧಾರ ತೆಗೆದುಕೊಂಡಿದೆ.
- ರಾತ್ರಿ ವೇಳೆಯ ಅಕ್ರಮ ವಿಲೇವಾರಿಯನ್ನು ತಡೆಯಲು ಪ್ರಹರಿ ವಾಹನದ ಜೊತೆಗೆ ಆಯಾ ವಲಯಗಳಲ್ಲಿ ಕಂದಾಯ/ಆರೋಗ್ಯ/ಕಾಮಗಾರಿ ವಿಭಾಗಗಳನ್ನೊಳಗೊಂಡ ಹಿರಿಯ ಅಧಿಕಾರಿಗಳ ನೇತೃತ್ವದ ವಿಶೇಷ ತಂಡವೊಂದನ್ನು ರಚಿಸಿದೆ.
- ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯಿದೆ 1976 (ಕೆಎಂಸಿ ಕಾಯಿದೆ) ಪ್ರಕರಣ 436-ಎ ಮತ್ತು 441ರ ಪ್ರಕಾರ **ಮೇಲ್ಕಂಡ ಚಟುವಟಿಕೆಗಳಲ್ಲಿ ತೊಡಗಿದವರಿಗೆ ರೂ.5000/- ದಂಡ ವಿಧಿಸಲ್ಪಡುವುದು ಹಾಗೂ ಇದಕ್ಕೆ ಬಳಸಿದ ವಾಹನಗಳನ್ನು ಒಂದು ತಿಂಗಳ ಅವಧಿಗೆ ಪಾಲಿಕೆ ವಶಕ್ಕೆ ತೆಗೆದುಕೊಳ್ಳಲಾಗುವುದು.**
- ಕಟ್ಟಡ ಮಾಲೀಕರು, ಗುತ್ತಿಗೆದಾರರು ಮತ್ತು ಸಾರ್ವಜನಿಕರು, ಕಟ್ಟಡ ಅವಶೇಷಗಳು ಮತ್ತು ಇತರೆ ತ್ಯಾಜ್ಯ ವಸ್ತುಗಳನ್ನು ಸುರಿಯಲು ಕೆಳಕಂಡ ನಿಗದಿತ ಸ್ಥಳಗಳನ್ನು ಗುರುತಿಸಲಾಗಿದ್ದು, ವಲಯವಾರು ವಿಲೇವಾರಿ ಮಾಡಲು ಈ ಮೂಲಕ ಸೂಚಿಸಲಾಗಿದೆ.

**ದೂರುಗಳನ್ನು ನೋಂದಾಯಿಸಲು ಕರೆ ಮಾಡಿ : 080-2266 0000**

**ಕೇಂದ್ರ ಕಚೇರಿ : 080-2222 1188, 2222 5657, 2297 5595**

| ವಲಯ | ನಿಯಂತ್ರಣ ಕೊಠಡಿ ದೂರವಾಣಿ ಸಂಖ್ಯೆ | ನಿಗದಿಮಾಡಿರುವ ಕಲ್ಲು ಗಣಿಯಿರುವ ಪ್ರದೇಶ | ಸರ್ವೆ ನಂ. | ವಿಸ್ತೀರ್ಣ ಎಕರೆಗಳಲ್ಲಿ |
|---|---|---|---|---|
| ರಾಜರಾಜೇಶ್ವರಿ ನಗರ ವಲಯ | 28600954 | ಮಲ್ಲಸಂದ್ರ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು | 33 | 30-00 |
| ಮಹದೇವಪುರ ವಲಯ | 28512301, 28512300 | ಕಾಡು ಅಗ್ರಹಾರ ಗ್ರಾಮ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು | 34 | 18-04 |
| ಯಲಹಂಕ ವಲಯ | 22975936, 23636671 | ಶ್ರೀನಿವಾಸಪುರ ಗ್ರಾಮ ಮತ್ತು ಕೋಗಿಲು ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು | 15 ಮತ್ತು 99 | 10-00 |
| ದಾಸರಹಳ್ಳಿ ವಲಯ | 28394909, 22975904 | ಮಲ್ಲಸಂದ್ರ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು | 33 | 30-00 |
| ಬೊಮ್ಮನಹಳ್ಳಿ ವಲಯ | 25735642 | ಗೊಲ್ಲಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು | 58 | 60-00 |
| ಪೂರ್ವ ವಲಯ | 22975803 | ಕಣ್ಣೂರು ಗ್ರಾಮ, ಬಿದರಹಳ್ಳಿ, ಬೆಂಗಳೂರು ಪೂರ್ವ ತಾಲ್ಲೂಕು | 50 | 50-00 |
| ಪಶ್ಚಿಮ ವಲಯ | 23463366, 23561692 | ಮಲ್ಲಸಂದ್ರ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು | 33 | 30-00 |
| ದಕ್ಷಿಣ ವಲಯ | 26566362 | ಎಸ್.ಬಿಂಗಿಪುರ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು | 179 | 20-06 |

**ಬೆಂಗಳೂರಿನ ಸೌಂದರ್ಯ, ಸಾರ್ವಜನಿಕರ ಆಸ್ತಿ-ಪಾಸ್ತಿ ಕಾಪಾಡುವಲ್ಲಿ ಪಾಲಿಕೆಯೊಂದಿಗೆ ಸಹಕರಿಸಿ**

ಮಹಾಪೌರರು | ಉಪ ಮಹಾಪೌರರು | ಆಯುಕ್ತರು